# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 1350
2) ಸದಸ್ಯರ ಹೆಸರು : ಶ್ರೀ. ಪ್ರಕಾಶ್ ಕೆ ರಾಥೋಡ್
3) ಉತ್ತರಿಸಬೇಕಾದ ದಿನಾಂಕ: : 09.03.2022
4) ಉತ್ತರಿಸುವವರು : ಮಾನ್ಯ ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು .

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಬೆಂಗಳೂರು ನಗರದ ಸಂಚಾರ ದಟ್ಟಣೆ ಕಡಿಮೆ ಮಾಡಲು ಉಪನಗರ ರೈಲು ಯೋಜನೆ ಯಾವ ಹಂತದಲ್ಲಿದೆ; | ಬೆಂಗಳೂರು ಉಪನಗರ ರೈಲು ಯೋಜನೆಗೆ ಆರ್ಥಿಕ ವ್ಯವಹಾರಗಳ ಕುರಿತ ಕೇಂದ್ರ ಸಚಿವ ಸಂಪುಟ ಸಮಿತಿಯು ಅಕ್ಟೋಬರ್-2020 ರಲ್ಲಿ ಅನುಮೋದನೆ ನೀಡಿದೆ. ಈ ಯೋಜನೆಯ ಅಂದಾಜು ವೆಚ್ಚ ರೂ.15,767.00 ಕೋಟಿಗಳಾಗಿದೆ. ಈ ಯೋಜನೆಯಲ್ಲಿನ ರೂ.12,396.00 ಕೋಟಿಗಳನ್ನು 20:20:60 ಅನುಪಾತದಲ್ಲಿ (ರಾಜ್ಯ : ಕೇಂದ್ರ ಸರ್ಕಾರ : ಬಾಹ್ಯಸಾಲ), ಅಂದರೆ, ತಲಾ ರೂ.2,479.00 ಕೋಟಿಗಳನ್ನು ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಹಾಗೂ ರೂ.7,438.00 ಕೋಟಿಗಳನ್ನು ಬಾಹ್ಯಸಾಲ ಹಾಗೂ ಉಳಿದ ರೂ.3,371.00 ಕೋಟಿಗಳನ್ನು ಜಿ.ಎಸ್.ಟಿ. ಹೊಂದಾಣಿಕೆ ಮತ್ತು ಇತರ ಮೂಲಗಳಿಂದ ಒದಗಿಸಲಾಗುವುದು.<br><br>148.17 ಕಿಮೀ ಗಳ ಉದ್ದದ ಈ ರೈಲ್ವೆ ಜಾಲವನ್ನು ಕರ್ನಾಟಕ ಸರ್ಕಾರ ಹಾಗೂ ರೈಲ್ವೆ ಮಂತ್ರಾಲಯದ ಜಂಟಿ ಸಹಭಾಗಿತ್ವ ಸಂಸ್ಥೆಯಾದ ಕೆ-ರೈಡ್ ಮುಖೇನ ಕಾರ್ಯಗತಗೊಳಿಸಲಾಗುತ್ತಿದೆ.<br><br>ಈ ಯೋಜನೆಯನ್ನು ಈ ಕೆಳಗಿನ 04 ಕಾರಿಡಾರ್‌ಗಳಲ್ಲಿ ನಿರ್ಮಿಸಲು ಉದ್ದೇಶಿಸಲಾಗಿದೆ.<br>i. ಕೆಎಸ್‌ಆರ್ ಬೆಂಗಳೂರುನಗರ– ದೇವನಹಳ್ಳಿ (41.40 ಕಿ.ಮೀ).<br>ii. ಬೈಯಪ್ಪನಹಳ್ಳಿ – ಚಿಕ್ಕಬಾಣಾವಾರ (25.01 ಕಿ.ಮೀ).<br>iii. ಕೆಂಗೇರಿ – ವೈಟ್ ಫೀಲ್ಡ್ (35.52 ಕಿ.ಮೀ).<br>iv. ಹೀಲಲಿಗೆ – ರಾಜಾನುಕುಂಟೆ (46.24 ಕಿ.ಮೀ).<br><br>ಕಾರಿಡಾರ್-2 (ಬೈಯಪ್ಪನಹಳ್ಳಿ – ಚಿಕ್ಕಬಾಣಾವಾರ - 25.01 ಕಿ.ಮೀ)ರ ಸಿವಿಲ್ ಕಾಮಗಾರಿಯ ಟೆಂಡರ್ ಅನ್ನು ಕರೆಯಲಾಗಿದ್ದು, ಮಾರ್ಚ್ 01 ರಂದು ಟೆಂಡರ್ ಬಿಡ್ಡಿಂಗ್ ತೆರೆಯಲಾಗಿದೆ ಹಾಗೂ ತಾಂತ್ರಿಕ ಅರ್ಹತೆಯ ಮೌಲ್ಯಮಾಪನ ಮಾಡಲಾಗುತ್ತಿದ್ದು, ಮಾರ್ಚ್ ಅಂತ್ಯದ ವೇಳೆಗೆ ಕಾಮಗಾರಿಯನ್ನು ಆರಂಭಿಸಲು ಉದ್ದೇಶಿಸಲಾಗಿದೆ.<br><br>ಈ ಟೆಂಡರ್ ಕರೆಯುವ ಮುನ್ನ ಭೂಸ್ವಾಧೀನ ಪ್ರಕ್ರಿಯೆ, ಸವಲತ್ತುಗಳ ವರ್ಗಾವಣೆ (Utility Shifting), ವಿನ್ಯಾಸ (Design) ರಚನೆಗಳಂತಹ ಪೂರ್ವಭಾವಿ ಕಾರ್ಯಗಳನ್ನು ಪೂರ್ಣಗೊಳಿಸಲಾಗಿದೆ. |

| | | |
|---|---|---|
| | | ಉಳಿದ ಮೂರು ಕಾರಿಡಾರ್‌ಗಳ ಟೆಂಡರನ್ನು ಕರೆಯಲು ಪೂರ್ವಭಾವಿ ಸಿದ್ಧತೆಗಳನ್ನು ನಡೆಸಲಾಗುತ್ತಿದ್ದು, 2026 ರ ಅಂತ್ಯದ ವೇಳೆಗೆ ಕಾಮಗಾರಿಯನ್ನು ಪೂರ್ಣಗೊಳಿಸುವ ಗುರಿಯನ್ನು ಹೊಂದಲಾಗಿದೆ. |
| (ಆ) | ಈ ಯೋಜನೆಗೆ ರೈಲ್ವೆ ಮಂಡಳಿಯಿಂದ ಅನುಮೋದನೆ ದೊರಕಿದೆಯೇ; ಅವುಗಳು ಯಾವುವು; (ಸಂಪೂರ್ಣ ವಿವರ ನೀಡುವುದು) | ಬೆಂಗಳೂರು ಉಪನಗರ ರೈಲು ಯೋಜನೆಗೆ ಆರ್ಥಿಕ ವ್ಯವಹಾರಗಳ ಕುರಿತ ಕೇಂದ್ರ ಸಚಿವ ಸಂಪುಟ ಸಮಿತಿಯು ಅಕ್ಟೋಬರ್-2020 ರಲ್ಲಿ ಅನುಮೋದನೆಯನ್ನು ನೀಡಿದೆ.<br>(ಅನುಮೋದನಾ ಪತ್ರವನ್ನು **ಅನುಬಂಧ-1** ರಲ್ಲಿರಿಸಿದೆ) |
| (ಇ) | ಈ ಯೋಜನೆಗಳನ್ನು ಯಾವಾಗ ಆರಂಭಿಸಲಾಗುವುದು? (ವಿವರ ನೀಡುವುದು). | ಕಾರಿಡಾರ್-2 (ಬೈಯಪ್ಪನಹಳ್ಳಿ – ಚಿಕ್ಕಬಾಣವಾರ - 25.01 ಕಿ.ಮೀ)ರ ಕಾಮಗಾರಿಯ ಪೂರ್ವ ಸಿದ್ಧತಾ ಕಾಮಗಾರಿಯ ಕೆಲಸಗಳು ಪೂರ್ಣಗೊಂಡಿದ್ದು, ಸಿವಿಲ್ ಕಾಮಗಾರಿಗಾಗಿ ಟೆಂಡರನ್ನು ಕರೆಯಲಾಗಿದ್ದು, ಮಾರ್ಚ್ 01 ರಂದು ಟೆಂಡರ್ ಬಿಡ್ಡಿಂಗ್ ತೆರೆಯಲಾಗಿದೆ ಹಾಗೂ ತಾಂತ್ರಿಕ ಅರ್ಹತೆಯ ಮೌಲ್ಯಮಾಪನ ಮಾಡಲಾಗುತ್ತಿದ್ದು, ಮಾರ್ಚ್ ಅಂತ್ಯದ ವೇಳೆಗೆ ಕಾಮಗಾರಿಯನ್ನು ಆರಂಭಿಸಲು ಉದ್ದೇಶಿಸಲಾಗಿದೆ.<br>ಉಳಿದ ಕಾರಿಡಾರ್‌ಗಳ ಕಾಮಗಾರಿಗಳ ಪೂರ್ವಸಿದ್ಧತಾ ಕೆಲಸಗಳು ಪ್ರಗತಿಯಲ್ಲಿದ್ದು, ಹಂತ ಹಂತವಾಗಿ ಟೆಂಡರ್‌ಗಳನ್ನು ಕರೆಯಲು ಉದ್ದೇಶಿಸಲಾಗಿದೆ |

ಸಂಖ್ಯೆ: ಮೂಅಇ 74 ರಾರಾಹೆ 2022

(ವಿ.ಸೋಮಣ್ಣ)
ವಸತಿ ಮತ್ತು ಮೂಲಸೌಲಭ್ಯ
ಅಭಿವೃದ್ಧಿ ಸಚಿವರು

MINISTRY OF RAILWAYS
(RAILWAY BOARD)

No. 2019/JV Cell/KRIDE/BSTP/EBR/07

New Delhi, dated .10.2020

## OFFICE MEMORANDUM

**Sub: Sanction of Bengaluru Suburban Transport Project (148.17 kms).**

The undersigned is directed to convey that the Cabinet Committee of Economic Affairs, in its meeting held on 07.10.2020, has approved the work of Bengaluru Suburban Transport Project at an estimated cost of Rs.13926 crore (Rupees Thirteen Thousand Nine Hundred Twenty Six Crore Only) and completion cost of Rs.15767 crore ( Rupees Fifteen Thousand Seven Hundred Sixty Seven Crores Only).

2. The project shall be funded by Ministry of Railways (MoR) and Government of Karnataka (GoK) who shall provide their share of equity through Rail Infrastructure Development Company (Karnataka) Ltd. (K-RIDE), a JV Company of MoR and GoK, as per the approved financing pattern on the completion cost as under:

| Particulars | Amount (Rs. In Cr.) | % Share |
|---|---|---|
| Equity by GoI | 2479 | 20% |
| Equity by Govt. of Karnataka | 2479 | 20% |
| Loan from Bank / Bilateral /Multilateral Funding Agencies(MFA) | 7438 | 60% |
| Total Cost | **12396** | **100%** |
| Sub-ordinate Debt for Central GST and Basic custom duty by Govt. of India | 763 | |
| Sub-ordinate Debt for land and R&R by Govt. of Karnataka | 1470 | - |
| Sub-ordinate Debt for State GST by Govt. of Karnataka | 785 | - |
| Sub-ordinate Debt for IDC for JICA ODA Loan @ 1.4% & Front end Fee @ 0.1% by Govt. of Karnataka | 353 | - |
| Total Cost | 15767 | - |

3. The works included in this project as per the 4 corridors are as under:

| Item | Corridor-1 | Corridor-2 | Corridor-3 | Corridor-4 | Total |
|---|---|---|---|---|---|
| Length (Km) | 41.4 | 25.01 | 35.52 | 46.24 | 148.17 |
| From | Bengaluru city to Yelahanka to Devanhalli + airport link | Baiyyappanahalli to Yeshwantpura to Chikbanavar | Kengeri to Bengalore city to Whitefield | Heelalige to Yelahanka to Rajanakunte | |

4. Component-wise breakup of the completion cost of the project is as below:

| Sl. No | Item | Amount (Rs. in Crore) |
|---|---|---|
| 1.0 | Land + R&R | 1470 |
| 2.0 | Alignment, Formation and Airport connectivity | 4125 |
| 3.0 | Station Buildings | 1981 |
| 4.0 | Depot | 310 |
| 5.0 | P-Way | 727 |
| 6.0 | Traction & power supply incl. OHE, ASS etc. | 1050 |
| 7.0 | Signalling and Telecom. | 1373 |
| 8.0 | Rolling Stock | 0 |
| 9.0 | Misc., General security and Staff Qtr. | 379 |
| 10.0 | CGST and SGST | 1343 |
| 11.0 | General Charges & Contingencies | 815 |
| 12.0 | IDC | 353 |
| | Total | 13926 |
| 13.0 | Escalation @ 5 % p.a. | 1841 |
| | Grand Total | 15767 |

5. The completion period of the project is 6 years. However, ... with Airport link) has been planned for completion within 3 years after sanction.

Conditions:

The conditions of sanction of the project are as under:

(a) Procurement, Operation (with on board train staff only) and Maintenance of Rolling Stock should be kept on PPP Mode.

(b) MoR's contribution to equity is through budgetary support initially limited to Rs. 500 crores and the rest is proposed to be financed through the returns from the monetization of the Railway land as identified in the DPR as a part of Value Capture Financing (VCF) Framework. These vacant Railway land parcels is expected to generate upto Rs. 4815 crores which will accrue to MoR.

(c) State Government has agreed to grant a Floor Space Index (FSI) of 5 on Railway land on the influence zone of the corridor.

(d) State Govt. will set up an empowered committee to facilitate Ministry of Railways initiatives for the monetization of its land and its timely realization of the benefits to the project.

(e) Remaining expected VCF from Non Railway land to the tune of Rs 2573 Cr., which is expected to come through Premium FAR, Betterment Levy, Land use charge and Cess on approval of new layout shall be taken towards non fare box revenue to repay the debt.

(f) GoK and MoR will provide their land at nominal lease charges of Rs.1 per acre.

(g) K-RIDE shall have the autonomy in the fare fixation and fare will be kept comparable to Bangalore Metro.

(h) Procurement packages will be formulated on EPC basis.

The executing agency K-RIDE should take necessary steps to expedite execution, signing of concession agreement, land acquisition and financial closure etc.

21/10/2020
**(D.K. Mishra)**
**Director/MTP**
**Railway Board**
**011-47845480**

To

**Managing Director,**
Rail Infrastructure Development Company (Karnataka) Ltd. (K-RIDE),
MSIL House, 7th Floor,
36, Cunningham Road,
Bengaluru-560052.

No. 2019/JV Cell/KRIDE/BSTP/EBR/07

New Delhi, dated .10.2020

(i) PFA, South Western Railway, Hubli
(ii) Principal Director of Audit, South Western Railway, Hubli.
(iii) Dy. Comptroller & Auditor General of India/Railways, Room No.224, Rail Bhawan, New Delhi.

**For Member (Finance)**

Copy to:

1. Chief Secretary, Government of Karnataka, Room No: 110, Gate II, M S Building, Ambedkar Veedhi, Bengaluru, Karnataka 560001

2. General Manager, South Western Railway, Hubli.

21/10/2020
**(D.K. Mishra)**
**Director/MTP**
**Railway Board**